**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ಇವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ**

| **ಪ್ರಶ್ನೆ:** |
|---|
| ಪದ್ಮಭೂಷಣ ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್‌ನಲ್ಲಿ 2014 ರಿಂದ ಇಲ್ಲಿಯವರೆಗೂ ಕ್ರಿಮಿನಲ್ ಚಟುವಟಿಕೆಗಳು ನಡೆಯುತ್ತಿರುವುದು ತುಂಬಾ ಕಳವಳದ ವಿಷಯವಾಗಿದೆ. ಟ್ರಸ್ಟ್‌ನ ಆಸ್ಪತ್ರೆಯಲ್ಲಿ ಪ್ಲಂಬರ್ ಕೆಲಸ ಮಾಡುತ್ತಿದ್ದ ವ್ಯಕ್ತಿ ಮತ್ತು ಇಬ್ಬರು ಮಹಿಳೆಯರು ಸೇರಿದಂತೆ ನಾಲ್ಕು ಜನರು ತಾವೇ ಹುದ್ದೆ ಸೃಷ್ಟಿಸಿಕೊಂಡು, ಫೋರ್ಜರಿ ಸಹಿಗಳನ್ನು ಮಾಡಿ ಆದೇಶಗಳನ್ನು ಸೃಷ್ಟಿಸಿಕೊಂಡು, ಆಸ್ಪತ್ರೆ ಆವರಣದ ಮಳಿಗೆಗಳನ್ನು ತಾವೇ ಬಾಡಿಗೆಗೆ ಪಡೆದುಕೊಂಡು ಲಕ್ಷಾಂತರ ಹಣವನ್ನು ಲೂಟಿ ಮಾಡುತ್ತಿರುವುದು, 2014 ರಲ್ಲಿ ಟ್ರಸ್ಟಿಯಾಗಿದ್ದ ಶ್ರೀ ಅಮರ್‌ನಾಥ್ ಮೋದಿಯವರ ಸಾವು ಅನುಮಾನದಿಂದ ಕೂಡಿರುವುದು ಮತ್ತು 4 ಜನರಲ್ಲಿ ಒಬ್ಬ ಮಹಿಳೆ 2014 ರಲ್ಲಿ ಟ್ರಸ್ಟಿಯಾಗಿದ್ದ ಶ್ರೀ ಅಮರ್‌ನಾಥ್ ಮೋದಿಯವರ ಸಿಮ್ ಕಾರ್ಡ್‌ನ್ನು (+919845073358) ಇವತ್ತಿಗೂ ಬಳಸುತ್ತಿದ್ದು, ಕೋಟ್ಯಾಂತರ ರೂಗಳು ಆನ್‌ಲೈನ್ ಟ್ರ್ಯಾನ್ಜ್ಯಾಕ್ಷನ್‌ನಲ್ಲಿ ದುರುಪಯೋಗವಾಗುತ್ತಿರುವುದು ಮತ್ತು ಪ್ಲಂಬರ್ ಕೆಲಸ ಮಾಡುತ್ತಿದ್ದ ವ್ಯಕ್ತಿ ಟ್ರಸ್ಟ್‌ನ ಪ್ರಮುಖ ಧಾಖಲೆಗಳನ್ನು ಇನ್ಸೂರೆನ್ಸ್ ದಾಖಲೆಗಳನ್ನು ಹಾಗೂ ಟ್ರಸ್ಟ್‌ನ ಕೋಟ್ಯಾಂತರ ಎಫ್.ಡಿ. ದಾಖಲೆಗಳನ್ನು ಕದ್ದು, ಹಾಲಿ ಮ್ಯಾನೇಜಿಂಗ್ ಟ್ರಸ್ಟಿಯವರನ್ನು ಹಣಕ್ಕಾಗಿ ಬ್ಲ್ಯಾಕ್ ಮೇಲ್ ಮಾಡುತ್ತಿರುವುದು, ಹಾಲಿ ಮ್ಯಾನೇಜಿಂಗ್ ಟ್ರಸ್ಟಿಯವರು ಹಲವಾರು ಬಾರಿ ಪೊಲೀಸ್ ಇಲಾಖೆಗೆ ಮೊರೆ ಹೋಗಿದ್ದು, ಏನೂ ಪ್ರಯೋಜನೆಯಾಗದಿರುವುದು, ಟ್ರಸ್ಟ್ ಪರವಾಗಿರುವ ಮಾನ್ಯ ಘನ ನ್ಯಾಯಾಲಯಗಳ ಆದೇಶಗಳು ಉಲ್ಲಂಘನೆಯಾಗುತ್ತಿರುವುದು, ಘನ ಘೋರ ಅಪರಾಧವಾಗಿದೆ. ಎಲ್ಲಾ ದಾಖಲೆಗಳನ್ನು ನೋಡಿದಾಗ, ಇದರಲ್ಲಿ ಕಾಣದ ಕೈಗಳು ಕೆಲಸ ಮಾಡುತ್ತಿರುವುದು ಸ್ಪಷ್ಟವಾದಂತಿದೆ ಎಂಬ ವಿಷಯದ ಕುರಿತು. |
| **ಉತ್ತರ:** |
| ಪದ್ಮಭೂಷಣ ಡಾ॥ ಎಂ.ಸಿ. ಮೋದಿ ರವರು ಪ್ರಖ್ಯಾತ ಕಣ್ಣಿನ ತಜ್ಞರಾಗಿದ್ದರು, ಮಹಾಲಕ್ಷ್ಮಿ ಲೇಔಟ್‌ನಲ್ಲಿ ಎರಡು ಎಕರೆ ಜಮೀನನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ಪಡೆದುಕೊಂಡು ಡಾ॥ ಎಂ.ಸಿ ಮೋದಿ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಎಂಬ ಹೆಸರಿನಲ್ಲಿ ಕಣ್ಣಿನ ಆಸ್ಪತ್ರೆಯನ್ನು ಸ್ಥಾಪಿಸಿರುತ್ತಾರೆ. ತದನಂತರ ಡಾ॥ ಎಂ.ಸಿ. ಮೋದಿ ರವರು ಈ ಟ್ರಸ್ಟಿಗೆ ದಿನಾಂಕ: 05-09-1975 ರಲ್ಲಿ ಪದ್ಮಶ್ರೀ ಎಂ.ಸಿ ಮೋದಿ ಪಬ್ಲಿಕ್ ಟ್ರಸ್ಟ್ ಅನ್ನು ಪದ್ಮಭೂಷಣ ಎಂ.ಸಿ ಮೋದಿ ಪಬ್ಲಿಕ್ ಟ್ರಸ್ಟ್ ಎಂದು ಹೆಸರನ್ನು ಬದಲಾವಣೆ ಮಾಡಿರುತ್ತಾರೆ. ದಿನಾಂಕ 28-02-2000 ರಂದು ಡಾ॥ ಎಂ.ಸಿ. ಮೋದಿ ರವರು ತಮ್ಮ ಮಗನಾದ ಡಾ॥ ಅಮರನಾಥ್ ಮೋದಿ ಮತ್ತು ಸೊಸೆ ಡಾ॥ ಸುವರ್ಣ ಮೋದಿ ರವರನ್ನು ಸದರಿ ಟ್ರಸ್ಟಿನ ಅಜೀವ ಟ್ರಸ್ಟಿಗಳಾಗಿ ನೇಮಕ ಮಾಡಿರುತ್ತಾರೆ. ದಿನಾಂಕ: 11-11-2005 ರಂದು ಡಾ: ಎಂ.ಸಿ. ಮೋದಿಯವರು ಮೃತರಾಗಿದ್ದು, ಅವರ ಮಗ ಡಾ॥ ಅಮರನಾಥ್ ರವರು ಸದರಿ ಟ್ರಸ್ಟಿನ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು, ಅವರ ಪತ್ನಿ ಡಾ॥ ಸುವರ್ಣ ರವರು ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ದಿನಾಂಕ |

26-08-2012 ರಂದು ಡಾ॥ ಸುವರ್ಣ ಮೋದಿ ರವರು ಮೃತ ಹೊಂದಿದ್ದು, ಡಾ॥ ಅಮರನಾಥ್ ಮೋದಿ ಒಬ್ಬರೇ ಈ ಟ್ರಸ್ಟಿನ ಏಕೈಕ ಟ್ರಸ್ಟಿಯಾಗಿ ಮುಂದುವರೆದಿರುತ್ತಾರೆ. ಡಾ॥ ಅಮರನಾಥ್ ಮೋದಿ ರವರು ದಿನಾಂಕ: 28-01-2014 ರಂದು ಮೃತ ಹೊಂದಿರುತ್ತಾರೆ. ಡಾ॥ ಅಮರನಾಥ್ ಮೋದಿ ರವರಿಗೆ ಮಕ್ಕಳಿರುವುದಿಲ್ಲ. ಡಾ॥ ಅಮರನಾಥ ಮೋದಿ ರವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಮರಣ ನಂತರ ಟ್ರಸ್ಟನ್ನು ಯಾರು ನಡೆಸಬೇಕೆಂಬುದರ ಬಗ್ಗೆ ಯಾವುದೇ ಟ್ರಸ್ಟಿಯನ್ನು ನೇಮಕ ಮಾಡಿರದ ಕಾರಣ ಅವರ ಮರಣ ನಂತರ ಟ್ರಸ್ಟಿನ ಉಸ್ತುವಾರಿ ವ್ಯಕ್ತಿಗಳು ಇರುವುದಿಲ್ಲ.

ಡಾ॥ ಅಮರನಾಥ ಮೋದಿ ರವರು ಮೃತಹೊಂದಿದ್ದ ಸಂದರ್ಭದಲ್ಲಿ ಅವರ ಸಂಬಂಧಿಯಾದ ಶ್ರೀ ಸುಭಾಷ ಚಂದ್ರ ಮೋದಿ ರವರು ಅಂತ್ಯ ಸಂಸ್ಕಾರ ಹಾಗೂ ಇತರೆ ವಿಧಿ-ವಿಧಾನ ಮಾಡುವ ಸಲುವಾಗಿ ಬೆಂಗಳೂರಿಗೆ ಬಂದು ಆಸ್ಪತ್ರೆಯ ಆವರಣದಲ್ಲಿದ್ದ ಡಾ॥ ಅಮರನಾಥ ಮೋದಿ ರವರ ನಿವಾಸದಲ್ಲಿ ಉಳಿದುಕೊಂಡು ಟ್ರಸ್ಟ್‌ನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುತ್ತಾರೆ. ಈ ಸಂಬಂಧ ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್ ಮಾಜಿ ಸಚಿವರು ಮತ್ತು ಇತರೆ 4 ಜನರು ಪ್ರಿನ್ಸಿಪಾಲ್ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಬೆಂಗಳೂರು ಮಿಸ್ಲೇನಿಯಸ್ ಪಿಟಿಷನ್ ಸಂಖ್ಯೆ: 196/2014 ರಲ್ಲಿ ದಾವೆ ಹೂಡಿ, ಸದರಿ ಟ್ರಸ್ಟಿಗೆ ಸೂಕ್ತರಾದವರನ್ನು ಟ್ರಸ್ಟಿಯಾಗಿ ನೇಮಕ ಮಾಡುವಂತೆ ಹಾಗೂ ಅಲ್ಲಿಯವರೆಗೆ ರಿಸೀವರ್ ಅನ್ನು ನೇಮಕ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಪ್ರಕರಣವು ಹಾಲಿ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

ಕೋರ್ಟ್‌ನಲ್ಲಿ ದಾವೆಗಳಿರುವಾಗಲೇ ಟ್ರಸ್ಟ್‌ನ ಅಧಿಕಾರವನ್ನು ವಹಿಸಿಕೊಳ್ಳಲು ಎರಡು ಕಡೆಯವರು ಪ್ರಯತ್ನಗಳನ್ನು ಮಾಡುತ್ತಿದ್ದರಿಂದ ಕಾನೂನು ಸುವ್ಯವಸ್ಥೆಗೆ ಭಂಗವುಂಟಾಗುವ ಸಂಭವವಿದ್ದರಿಂದ ದಿನಾಂಕ: 14-02-2014 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆ, ಬೆಂಗಳೂರು ನಗರ ರವರು ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್‌ನಲ್ಲಿನ ವಿವಾದಕ್ಕೆ ಸಂಬಂಧಿಸಿದಂತೆ ಮಹಾಲಕ್ಷ್ಮಿ ಪೊಲೀಸ್ ಠಾಣಾ ಮೊ.ಸಂ. 41/2014 ಕಲಂ 145 ಸಿ.ಆರ್.ಪಿ.ಸಿ. ರೀತ್ಯಾ ಪ್ರಕರಣ ದಾಖಲು ಮಾಡಿರುತ್ತಾರೆ. ಸದರಿ ವಿವಾದಕ್ಕೆ ಸಂಬಂಧಿಸಿದಂತೆ ಕಲಂ 146 ಸಿ.ಆರ್.ಪಿ.ಸಿ ರಡಿ ಶ್ರೀ ಗೋಪಾಲಸ್ವಾಮಿ, ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರನ್ನು ದಿನಾಂಕ 31-05-2014 ರಂದು ರಿಸೀವರ್ ಆಗಿ ಬೆಂಗಳೂರು ನಗರ ಉತ್ತರ ತಾಲ್ಲೂಕು ತಹಶೀಲ್ದಾರರು ನೇಮಕ ಮಾಡಿ ಎಂಎಜಿ(107)ಸಿಆರ್:392/13-14 ರಲ್ಲಿ ಆದೇಶಿಸಲಾಗಿರುತ್ತದೆ.

ಮುಂದುವರೆದು ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ರವರು ತಮ್ಮ ಆದೇಶ ಪತ್ರ ಸಂಖ್ಯೆ: ಎಂಎಜಿ(107)ಸಿಆರ್:392/13-14, ದಿನಾಂಕ: 16-12-2016 ರಲ್ಲಿ ನ್ಯಾಯಾಲಯದ ಅಂತಿಮ ಆದೇಶಗಳನ್ನು ಕಾಯ್ದಿರಿಸಿ ಶ್ರೀ ಕೆ. ಗೋಪಾಲಸ್ವಾಮಿ, ವಿಶೇಷ ತಹಶೀಲ್ದಾರ್ ಇವರು ದಿನಾಂಕ: 30-11-2016 ರಂದು ವಯೋನಿವೃತ್ತಿ ಹೊಂದಿರುವುದರಿಂದ ಜಿಲ್ಲಾ ಆರೋಗ್ಯಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರನ್ನು ತಾಂತ್ರಿಕ ಪ್ರಪಕರಾಗಿ (Technical Receiver) ಹಾಗೂ ಶ್ರೀ ಹೆಚ್. ಶ್ರೀನಿವಾಸ, ವಿಶೇಷ ತಹಶೀಲ್ದಾರ್ (ಪ್ರಭಾರ) ಇವರನ್ನು ಆಡಳಿತ ಪ್ರಪಕರಾಗಿ (Administrative Receiver) ನೇಮಕ ಮಾಡಿರುತ್ತಾರೆ.

ಡಾ॥ ಎಂ.ಸಿ ಮೋದಿ ಆಸ್ಪತ್ರೆ ಒಡತನಕ್ಕೆ ಸಂಬಂಧಿಸಿದಂತೆ ಡಾ॥ ಅಮರನಾಥ ಮೋದಿ ರವರು ಮರಣಕ್ಕೆ ಮುಂಚಿತವಾಗಿಯು ಆಸ್ಪತ್ರೆಯಲ್ಲಿ ಆಡಳಿತಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ ವ್ಯಕ್ತಿಗಳಿಗೂ ಮತ್ತು ಸುಭಾಷ್ ಚಂದ್ರ ಮೋದಿ ಹಾಗೂ ಇತರರ ನಡುವೆ ವ್ಯಾಜ್ಯವಿದ್ದು ಸ್ಥಳದಲ್ಲಿ ಸಾರ್ವಜನಿಕರ ಶಾಂತಿ ಮತ್ತು ನೆಮ್ಮದಿಗೆ ಭಂಗ ತಂದು ಕಾನೂನು ಸುವ್ಯವಸ್ಥೆಗೆ ಭಂಗ ತರುವ ಸಾದ್ಯತೆ ಇದ್ದುದರಿಂದ ಎರಡು ಪಾರ್ಟಿಗಳ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ದಿನಾಂಕ: 26-02-2017 ರಂದು ಮೊ.ಸಂ. 84/2017 ಕಲಂ: 107 ಸಿಆರ್‌ಪಿಸಿ ಮತ್ತು ಮೊ.ಸಂ. 85/2017 ಕಲಂ 107 ಸಿಆರ್‌ಪಿಸಿ ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಿ ಮುಂಜಾಗ್ರತ ಕ್ರಮ ಜರುಗಿಸಿರುತ್ತೆ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಡಬ್ಲ್ಯೂಪಿ ಸಂಖ್ಯೆ: 40001/2017 ರ ಆದೇಶದಂತೆ ಮೋದಿ ಕಣ್ಣಿನ ಆಸ್ಪತ್ರೆಗೆ ಸೂಕ್ತ ರಕ್ಷಣೆಯನ್ನು ಕಲ್ಪಿಸಿ ಮಾನ್ಯ ನ್ಯಾಯಾಲಯದ ಆದೇಶಗಳಂತೆ ಕ್ರಮ ಕೈಗೊಳ್ಳಲಾಗಿದೆ.

ದಿನಾಂಕ: 22-09-2018 ರಂದು ಮಾನ್ಯ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರು ಕಲಂ: 145 ಸಿ.ಆರ್.ಪಿ.ಸಿ ಅಡಿಯಲ್ಲಿ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಮೊ.ಸಂ. 41/2014 ಅನ್ನು ಮುಂದುವರೆಸಿ ಟ್ರಸ್ಟಿನ ಸ್ವತ್ತನ್ನು ತಮ್ಮ ವಶಕ್ಕೆ ತೆಗೆದುಕೊಂಡು ಕಲಂ 146 ಸಿ.ಆರ್.ಪಿ.ಸಿ ಅಡಿಯಲ್ಲಿ ಟ್ರಸ್ಟಿನ ರಿಸಿವರ್ ಆಗಿರುತ್ತಾರೆ.

ದಿನಾಂಕ: 19-11-2018 ರಂದು ಸುಭಾಷ್ ಚಂದ್ರ ಮೋದಿ ರವರು ಕಿಶೋರ್ ಮಾನೆ ಹಾಗೂ ಇತರರು ಮೋದಿ ಆಸ್ಪತ್ರೆಯ ಬಳಿ ಅಕ್ರಮ ಕೂಟ ಸೇರಿಕೊಂಡ ಪಿರ್ಯಾದುದಾರರನ್ನು ಕೊಲೆ ಮಾಡುವ ಉದ್ದೇಶದಿಂದ ಸೇರಿಕೊಂಡಿದ್ದು ತಾವು ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆಂದು ಕೊಟ್ಟ ದೂರಿನ ಮೇರೆಗೆ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣಾ ಮೊ.ಸಂ 163/2018 ಕಲಂ 463-467-471-420-307-506 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸದ ಕಾರಣ ಸದರಿ ಪ್ರಕರಣವನ್ನು ಸಾಕ್ಷ್ಯಾಧಾರಗಳಿಲ್ಲದ ಪ್ರಕರಣವೆಂದು ಪರಿಗಣಿಸಿ ಮಾನ್ಯ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿ ಸಲ್ಲಿಸಿರುತ್ತದೆ.

ದಿನಾಂಕ: 29/01/2020 ರಂದು ಶ್ರೀ ಸುಭಾಷ್ ಚಂದ್ರ ಮೋದಿ ರವರು ಡಾ॥ ಅಮರನಾಥ ಮೋದಿ ರವರ ಸಮಯದಲ್ಲಿ ಆಸ್ಪತ್ರೆಯಲ್ಲಿ ನೇಮಕವಾಗಿದ್ದ ಕಿಶೋರ್ ಮಾನೆ ಮತ್ತು ಇತರರು ಒಳಸಂಚು ಮಾಡಿ ಟ್ರಸ್ಟ್‌ನ ಬೆಲೆ ಬಾಳುವ ದಾಖಲಾತಿಗಳನ್ನು ಕಳವು ಮಾಡಿಕೊಂಡು ನಕಲಿ ಮಾಡಿರುತ್ತಾರೆಂದು ಹಾಗೂ ದಿ: 21/01/2020 ರಂದು ತಮ್ಮ ಮನೆಯ ಬಾಲ್ಕನಿಯಲ್ಲಿರುವಾಗ್ಗೆ ಕತ್ತಿಯನ್ನು ಎಸೆದು ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆಂದು ಸಲ್ಲಿಸಿದ ದೂರಿನ ಮೇರೆಗೆ ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 06/2020 ಕಲಂ: 463, 467, 506, 381, 408 ಸಹಿತ 120(ಬಿ) ಮತ್ತು 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ಸಿ.ಓ.ಪಿ ಕಛೇರಿ ಆದೇಶ ಸಂಖ್ಯೆ ಸಿಆರ್‌ಎಂ2/22/ಸಿಓಪಿ/2020. ದಿ: 14/02/2020 ರಂತೆ ದಿ: 17/02/2020 ರಂದು ಸಿಸಿಬಿ ಘಟಕಕ್ಕೆ ವರ್ಗಾವಣೆ ನೀಡಿದ್ದು, ತನಿಖೆ ಕೈಗೊಂಡು ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸದ ಕಾರಣ ಸದರಿ ಪ್ರಕರಣವನ್ನು ಸಾಕ್ಷಾಧಾರಗಳಿಲ್ಲದ ಪ್ರಕರಣವೆಂದು ಪರಿಗಣಿಸಿ ಮಾನ್ಯ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿ ಸಲ್ಲಿಸಿರುತ್ತದೆ.

ದಿನಾಂಕ: 06/05/2020 ರಂದು ಶ್ರೀ ಕೀಶೋರ್ ಪಿ ಮಾನೆ, ಆಡಳಿತಾಧಿಕಾರಿ, ಡಾ .ಎಂ.ಸಿ ಮೋದಿ ಕಣ್ಣಿನ ಆಸ್ಪತ್ರೆ ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ದಿ: 06/12/2019 ರಂದು ಡಬ್ಲ್ಯೂಪಿ ಸಂಖ್ಯೆ 4420/2019 ರಲ್ಲಿ ಮಾನ್ಯ ಪ್ರಧಾನ ಸತ್ರ ನ್ಯಾಯಾಲಯ ಬೆಂಗಳೂರು ನಗರದ ಸೀಮಿಸ್ ಸಂಖ್ಯೆ 196/2014 ರಲ್ಲಿ ತೀರ್ಮಾನವಾಗುವವರೆಗೆ ಯಾಥಾಸ್ಥಿತಿ ಕಾಪಾಡುವಂತೆ ಆದೇಶ ಮಾಡಿದ್ದರೂ ಸುಭಾಷ ಚಂದ್ರ ಮೋದಿ ಮತ್ತು ಇತರರು ಮೋದಿ ಆಸ್ಪತ್ರೆಗೆ ಅಕ್ರಮ ಪ್ರವೇಶ ಮಾಡಿ ಬೆದರಿಕೆ ಹಾಕಿರುತ್ತಾರೆಂದು ಕೊಟ್ಟ ದೂರಿನ ಮೇರೆಗೆ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಯಲ್ಲಿ ಮೊ.ಸಂ. 75/2020 ಕಲಂ 448, 427, 509, 504, 506 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು, ಪ್ರಕರಣದಲ್ಲಿ ಪೂರಕ ಸಾಕ್ಷಾಧಾರಗಳಿಲ್ಲದ ಕಾರಣ ಮಾನ್ಯ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿಯನ್ನು ಸಲ್ಲಿಸಿರುತ್ತದೆ.

ದಿನಾಂಕ: 03-12-2022 ರಂದು ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ರವರು ನೀಡಿದ ದೂರಿನಲ್ಲಿ ಪದ್ಮಭೂಷಣ ಡಾ॥ ಎಂ.ಸಿ ಮೋದಿ ಟ್ರಸ್ಟ್ ಕಣ್ಣಿನ ಆಸ್ಪತ್ರೆಗೆ ದಿನಾಂಕ: 02-12-2022 ರಂದು ಸಂಜೆ 6-30 ಗಂಟೆಯ ಸಮಯದಲ್ಲಿ ಸುಭಾಷ್ ಮೋದಿ ಅವರ ಮಗ ಮಲ್ಲಿಕಾರ್ಜುನ್ ಮತ್ತು ಪ್ರಿಯದರ್ಶಿನಿ ರವರು ಕಾನೂನು ಬಾಹಿರವಾಗಿ ಆಸ್ಪತ್ರೆಗೆ ಪ್ರವೇಶಿಸಿ ಬಾಗಿಲಿನ ಬೀಗವನ್ನು ಹೊಡೆದು ಆಸ್ಪತ್ರೆಯಲ್ಲಿದ್ದ ಕೋಟ್ಯಾಂತರ ರೂ ಹಣ ಮತ್ತು ಟ್ರಸ್ಟಿನ ಸ್ವತ್ತುಗಳ ಎಲ್ಲಾ ಮೂಲ ದಾಖಲೆಗಳನ್ನು ದೋಚಿಕೊಂಡು ಹೋಗಿರುತ್ತಾರೆ ಎಂದು ದೂರನ್ನು ನೀಡಿದ್ದು, ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣಾ ಮೊ.ಸಂ: 234/2022 ಕಲಂ 380, 454, 457, 448 ಸಹಿತ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.

ಶ್ರೀ ಅಮರನಾಥ ಮೋದಿ ರವರು ಜೀವಿತಾವಧಿಯಲ್ಲಿ ತಮ್ಮ ಮರಣ ನಂತರ ಈ ಟ್ರಸ್ಟನ್ನು ಯಾರು ವಹಿಸಿಕೊಳ್ಳಬೇಕೆಂದು ಎಲ್ಲಿಯೂ ನಮೂದು ಮಾಡಿರದ ಕಾರಣ ಟ್ರಸ್ಟ್‌ನ ಅಧಿಕಾರವನ್ನು ವಹಿಸಿಕೊಳ್ಳುವ ಸಂಬಂಧ ಶ್ರೀ ಸುಭಾಷ್ ಚಂದ್ರ ಮೋದಿ ಹಾಗೂ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಮತ್ತು ಇತರರ ನಡುವೆ ವ್ಯಾಜ್ಯವಿದ್ದು, ಹಾಲಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ. ಸದರಿ ಸ್ಥಳದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಂಬಂಧ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಮಾನ್ಯ ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ವಹಿಸಲಾಗುವುದು. ಪದ್ಮಭೂಷಣ ಡಾ: ಎಂ.ಸಿ ಮೋದಿ ಪಬ್ಲಿಕ್ ಟ್ರಸ್ಟ್‌ನ ಸಂಬಂಧ ಎರಡು ಕಡೆಯ ಪಾರ್ಟಿರವರುಗಳು ಮಹಾಲಕ್ಷ್ಮೀ ಪೊಲೀಸ್ ಠಾಣೆ ಹಾಗೂ ಮೇಲಾಧಿಕಾರಿಗಳ ಕಛೇರಿಗೆ ಹಲವು ದೂರು ಅರ್ಜಿಗಳನ್ನು ನೀಡಿದ್ದು, ಅವುಗಳನ್ನು ನಿಯಮಾನುಸಾರ ಅಗತ್ಯಕ್ರಮ ಕೈಗೊಳ್ಳಲಾಗಿದೆ.

**ಹೆಚ್‌ಡಿ 13 ಪಿಸಿಕ್ಯೂ 2023**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.